ಎನ್‌ಕ್ರೋಚ್‌ಮೆಂಟ್ ಆಗಿದೆ ಎಂಬುದನ್ನು ಕೂಡ ಪ್ರಕಟಣೆ ಮಾಡಿ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ವಿಚಾರ ಮಾಡುತ್ತಿದ್ದೇವೆ. ಇದು ಸಾಕಷ್ಟು ಕಾಲವನ್ನು ತೆಗೆದುಕೊಳ್ಳುತ್ತದೆ. ಏಕೆಂದರೆ, ತಮಗೂ ಗೊತ್ತಿರಬಹುದು. ಯಾರ ಮೇಲಾದರೂ ನಾವು ಕೂಡಲೇ ಕ್ರಮ ತೆಗೆದಕೊಂಡರೆ, ಅವರು ಮತ್ತೆ ಕೋರ್ಟಿಗೆ ಹೋಗುತ್ತಾರೆ. ಲಕ್ನೋದಲ್ಲಿ ತಾವು ನೋಡಿರಬಹುದು. ಲಾಸ್ಟ್ ಟೈಮ್ ಎಲೆಕ್ಷನ್ ಟೈಮಿನಲ್ಲಿ ನಾವು ಮತ್ತು ಖರ್ಗೆಯವರು ಹೋಗಿದ್ದೆವು. ಅಲ್ಲೇನು ಮಾಡಿದ್ದಾರೆಂದರೆ, 35'-40" ಅಳತೆ ಸೈಟ್ ಇದ್ದರೂ ಕೂಡ 3-4 ಮಹಡಿ ಮನೆಗಳನ್ನು ಕಟ್ಟಲಿಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ನಾವು ಕೂಡ ಆಕರ್ಷಕ ಪ್ರಸ್ತಾವನೆಯನ್ನು ಕೊಡಬೇಕಾಗುತ್ತದೆ. ಆಗ ಯಾರೂ ಕೂಡ ಕೋರ್ಟಿಗೆ ಹೋಗುವುದಿಲ್ಲ. ನಮ್ಮ ಸ್ಟಡಿ ಟೀಮ್ ಕೊಟ್ಟಿರತಕ್ಕ ವರದಿಯನ್ನು ಕೂಡ, ನಮ್ಮ ಇಲಾಖೆ ಬೇಡಿಕೆಗಳ ವಿಷಯ ಇಲ್ಲಿ ಚರ್ಚೆಗೆ ಬಂದಾಗ ನಾನು ಕೊಡುತ್ತೇನೆ. ಅದರ ಬಗ್ಗೆ ಕೂಡ ನಾವು ಬಹಳ ವಿಚಾರ ಮಾಡುತ್ತಾ ಇದ್ದೇನೆ. ತಾವು ಏನೇನು ಸಲಹೆಗಳನ್ನು ಕೊಟ್ಟಿದ್ದೀರಿ, ಅವುಗಳನ್ನು ನಾವು ನೋಡುತ್ತೇವೆ. ಶ್ರೀ ದಿನಕರ್‌ರವರು ಕೊಟ್ಟಿರತಕ್ಕ ವರದಿ ತಮಗೂ ಗೊತ್ತಿದೆ. ಏಕೆಂದರೆ, ತಾವು ಕೂಡ ಹೋಮ್ ಮಿನಿಸ್ಟರಾಗಿ ಕೆಲಸ ಮಾಡಿದ್ದೀರಿ. ಅವರು ಅತ್ಯಂತ ಪರ್‌ಫೆಕ್ಟ್ ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂಥಾದ್ದು ಇದೆ. ಇವೆಲ್ಲವನ್ನು ಇಂಪ್ಲಿಮೆಂಟ್ ಮಾಡಬೇಕಾಗಿದ್ದರೂ ಕೂಡ, ಪ್ರಾಕ್ಟಿಕಲ್ ಡಿಫಿಕಲ್ಟಿ ಇದೆ. ಆಂಧ್ರ, ಮಹಾರಾಷ್ಟ್ರಮತ್ತು ಯು.ಪಿ.ಯಲ್ಲಿ ಹೇಗೆ ಮಾಡಿದ್ದಾರೆಂಬ ಬಗ್ಗೆ ಕೂಡ ರಿಪೋರ್ಟ್ ಕೊಟ್ಟಿದ್ದಾರೆ. ಅದರ ಆಧಾರದ ಮೇಲೆ ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಹನುಮೇಗೌಡರ ಮತ್ತು ಡಿ.ಆರ್.ಪಾಟೀಲರ ಪ್ರಶ್ನೆಗಳನ್ನು ಮುಂದಿನ ಸೋಮವಾರ ತೆಗೆದುಕೊಳ್ಳೋಣ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

೩. (ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, 19ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು 94 ಪ್ರಶ್ನೆಗಳ ಪೈಕಿ, 60 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇವೆ.

ರಾಜ್ಯದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ

2086(2888)